ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ ---ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಪರಿಶಿಷ್ಟ ಜಾತಿ ವಿದ್ಯಾವಂತ ನಿರುದ್ಯೋಗಿಗಳ ಮತ್ತು ಅವರಿಗಿರುವ ಮೀಸಲಾತಿ ಏರಿಕೆಯ ಬಗ್ಗೆ

೧೭೪೬. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಎಷ್ಟು ?

ಆ) ಪರಿಶಿಷ್ಟ ಜನಾಂಗದ ಪದವಿ ಪಡೆದವರ ಸಂಖ್ಯೆ ಎಷ್ಟು ?

ಇ) ಆ ಪೈಕಿ ಸರ್ಕಾರಿ ಸೇವೆಯಲ್ಲಿರುವವರು ಎಷ್ಟು ?

ಈ) ರಾಜ್ಯದಲ್ಲಿ ಪರಿಶಿಷ್ಟ ಜನಾಂಗದ ಹೆಚ್ಚಳದಿಂದಾಗಿ ಈಗಿರುವ ಶೇ. ೧೮ ಮೀಸಲಾತಿಯನ್ನು ಶೇ. ೨೦ ಮೀಸಲಾತಿಗೆ ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೮೪,೨೫,೦೦೦

ಆ) ೫೦೩೮

ಇ) ಮಾಹಿತಿ ಲಭ್ಯವಿಲ್ಲ.

ಈ) ಪರಿಶೀಲನೆಯಲ್ಲಿದೆ.

ಉದ್ಯೋಗ ವಿನಿಯಮ ಕೇಂದ್ರಗಳ ಬಗ್ಗೆ

೧೬೯೪. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಉದ್ಯೋಗ ವಿನಿಮಯ ಕೇಂದ್ರಗಳೆಷ್ಟು ?

ಆ) ಕೊಡಗು ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಿಂದ ಈವರೆವಿಗೂ ಉದ್ಯೋಗ ದೊರಕಿರುವ ಅಭ್ಯರ್ಥಿಗಳೆಷ್ಟು ?

ಇ) ಈ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವರ್ಗಕ್ಕೆ ಸೇರಿದ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಈ) ನೇಮಕಾತಿಗಾಗಿ ಸಂದರ್ಶನಗಳನ್ನು ಯಾವ ಆಧಾರದ ಮೇರೆಗೆ ಕಳುಹಿಸಲಾಗುತ್ತಿದೆ (ಜಿಲ್ಲಾವಾರು, ಹುದ್ದೆವಾರು, ಪುರುಷ, ಮಹಿಳಾವಾರು ಪ್ರತ್ಯೇಕ ಅಂಕಿ ಅಂಶಗಳನ್ನು ನೀಡುವುದು),

ಶ್ರೀ ಎಸ್. ಕೆ ಕಾಂತಾ (ಕಾರ್ಮಿಕ ಸಚಿವರು).—

ಅ) ರಾಜ್ಯದಲ್ಲಿ ಒಟ್ಟು ಮೂವತ್ತೆರಡು ಉದ್ಯೋಗ ವಿನಿಮಯ ಕೇಂದ್ರಗಳಿರುತ್ತವೆ.